ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-ಮಾನ್ಯ ಸದಸ್ಯರು ಇನ್ನು ಮೇಲಾದರೂ ಮಾಡಿ ಎಂದು ಹೇಳಿದ್ದಾರೆ, ಖಂಡಿತವಾಗಿಯೂ ಇನ್ನು ಮೇಲೆ ಮಾಡುತ್ತೇವೆ. ಈಗಲೆ ಮ್ಯಾನುವಲ್‌ನಲ್ಲಿ ಗೈಡ್‌ಲೈನ್ಸ್ ಇದೆ.

ಅಧ್ಯಕ್ಷರು:-ಮಾನ್ಯ ಸಚಿವರಿಗೆ ಹಳೆಯ ಮೈಸೂರು ಕಡೆಯ ಮಾತುಗಳು ಅರ್ಥವಾಗುವುದಿಲ್ಲ. ಅಪಾರವಾದ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಅಪಾರ ಅಂದರೆ ಬಹಳ ಜಾಸ್ತಿ ಅನ್ಯಾಯವಾಗಿದೆ ಎಂದು ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ತಾವುಗಳು ಹೇಳುವುದರಲ್ಲಿ ಅರ್ಥ ಇದೆ. ಈ ಬೆನಿಫಿಶಿಯರ್ಸ್‌ನ್ನು ಐಡೆಂಟಿಫೈ ಮಾಡತಕ್ಕಂಥಾದ್ದನ್ನು ಗ್ರಾಮಸಭೆಗಳನ್ನು ಮಾಡಿ ಮಾಡಬೇಕೆಂದು ಇದೆ. ಈ ಅಧಿಕಾರಿಗಳು ಅಲ್ಲೇ ಕುಳಿತು ತಮಗೆ ಯಾರಿಗೆ ಬೇಕು ಎಂದು ನೋಡಿಕೊಂಡು ಮಂಡಳ ಪ್ರಧಾನರೂ ಅವರು ಸೇರಿ ಮಾಡತಕ್ಕಂಥಾದ್ದುಕೂಡ ಕೆಲವು ಕಡೆಗಳಲ್ಲಿ ಇದೆ. ಅದಕ್ಕಾಗಿಯೇ ಒಂದು ಗೈಡ್‌ಲೈನ್ಸ್‌ನ್ನು ಕೂಡ ನಾವು ಇಶ್ಯೂ ಮಾಡಿದ್ದೇವೆ. ಜವಾಹರ ರೋಜ್‌ಗಾರ್‌ಯೋಜನೆ ಮತ್ತು ಐಆರ್‌ಡಿಪಿ ಯೋಜನೆಯಲ್ಲಿ ಗೈಡ್‌ಲೈನ್ಸ್ ಏನು ಇದೆ, ಅದರ ಪ್ರಕಾರ ನೀವುಗಳು ಮಾಡಬೇಕೆಂದು ಸಂಬಂಧಪಟ್ಟವರಿಗೆ ಸರ್ಕ್ಯುಲರ್ ಕೊಟ್ಟಿದ್ದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ ಎಂಬುದು ಕೂಡ ನಮ್ಮ ಗಮನಕ್ಕೆ ಬಂದಿದೆ. ಇದನ್ನು ನಾನು ಸ್ವತ: ರಾಜ್ಯಮಟ್ಟದಲ್ಲಿ ರಿವ್ಯೂ ಮಾಡಿ ಮುಂದೆ ಏನು ಗೈಡ್‌ಲೈನ್ಸ್ ಕೊಡಬೇಕು ಮತ್ತು ಯಾವರೀತಿಯಾಗಿ ಇದನ್ನು ಇಂಪ್ಲಿಮೆಂಟ್ ಮಾಡಬಹುದು ಎಂದು ನೋಡಿ ಇರುವ ಕುಂದುಕೊರತೆಗಳನ್ನು ಸರಿಪಡಿಸುತ್ತೇನೆ.

ಶ್ರೀ ಕೆ.ಸಿದ್ದಯ್ಯ:-ತಾವು ಗೈಡ್‌ಲೈನ್ಸ್ ಕೊಟ್ಟರೆ ಬಹಳ ಸಂತೋಷ. ಈ ಗೈಡ್‌ಲೈನ್ಸ್ ಪ್ರಕಾರಸಂಬಂಧಪಟ್ಟ ಚೀಫ್ ಸೆಕ್ರೆಟರಿಯವರು ಮತ್ತು ಅಧಿಕಾರಿಗಳು ರಿವ್ಯೂ ರಿಪೋರ್ಟ್ ಕಳುಹಿಸುವ ಹಾಗೆ ಮಾಡುತ್ತೀರಾ ? ಬರೀ ಇನ್‌ಸ್ಟ್ರಕ್ಷನ್ಸ್ ಕೊಟ್ಟರೆ ಈಗಿರತಕ್ಕಂಥ ರೂಲ್ಸ್‌ನಲ್ಲಿ ಮ್ಯಾನುಯಲ್‌ನಲ್ಲಿ ಹೇಗೆ ಇದೆಯೋ ಹಾಗೆಯೇ ಇರುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-ಆಯಿತು, ರಿವ್ಯೂ ಮಾಡಿಸುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ:- ಅಧ್ಯಕ್ಷರೇ ಈ ಫಲಾನುಭವಿಗಳ ಪಟ್ಟಿಯನ್ನು ಮಂಡಲ ಪಂಚಾಯತಿಗಳ ಆಫೀಸಿನ ನೋಟಿಸ್ ಬೋರ್ಡ್‌ನಲ್ಲಿ ಹಾಕುವುದರಿಂದ ಯಾರಾದರೂ ಅರ್ಹರು ಆಯ್ಕೆ ಆಗಿಲ್ಲವಾದರೆ, ಅದನ್ನು ನೋಡಿದ ಜನರು ಅಬ್‌ಜೆಕ್ಷನ್ ರೈಸ್ ಮಾಡಲು ಅನುಕೂಲವಾಗುತ್ತದೆ. ಹಾಗೆ ಮಾಡಿದರೆ ಒಳ್ಳೆಯದು. ಆದ್ದರಿಂದ ದಯವಿಟ್ಟು ಎಲ್ಲ ಮಂಡಲ ಪಂಚಾಯಿತಿಗಳಿಗೆ ಸೂಚನೆ ಕೊಡುತ್ತೀರಾ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆಗಬಹುದು ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ.

ಬೈಲಹೊಂಗಲ ತಾಲ್ಲೂಕು ದೊಡ್ಡವಾಡ ಗ್ರಾಮದಲ್ಲಿ ಕ್ರೀಡಾಂಗಣದ ನಿರ್ಮಾಣ

(2348)ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಯುವಜನಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ದೊಡ್ಡವಾಡ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ಸಿ ಅಂಡ್ ಬಿ, ಬೆಳಗಾಂ, ಇವರು ಸ್ಟೇಡಿಯಂ ಕೆಲಸವನ್ನು ಪ್ರಾರಂಭಿಸಿ ಅರ್ಧಕ್ಕೆ

ನಿಲ್ಲಿಸಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ ಈ ಕೆಲಸಕ್ಕೆ ಬೆಳಗಾಂ ಲೋಕೋಪಯೋಗಿ ಇಲಾಖೆ ಸಿ. ಅಂಡ್ ಬಿ. ಅವರು ಎಷ್ಟು ಹಣವನ್ನು ಖರ್ಚು ಮಾಡಿರುವರು.

ಇ ಈ ಕೆಲಸವನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗುವುದು.

ಈ ಈ ಸ್ಪೇಡಿಯಂನಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ?

ಶ್ರೀ ಎಸ್.ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಆ ಹೌದು.

ಇ 1986ರಲ್ಲಿ ಹಿಂದಿನ ಡಿ.ಆರ್.ಡಿ.ಎಸ್.ನವರು ಎನ್.ಆರ್.ಇ.ಪಿ. ಯೋಜನೆಯಡಿಯಲ್ಲಿ ಬೆಳಗಾಂವ್ ಲೋಕೋಪಯೋಗಿ ಇಲಾಖೆಯ ಮೂಲಕ ರೂ.70,000-00ಗಳ ವೆಚ್ಚದಲ್ಲಿಭೂಮಿಯನ್ನುಸಮ ಮಾಡಲು ಖರ್ಚು ಮಾಡಿದ್ದಾರೆಂದು ವರದಿಯಾಗಿರುತ್ತದೆ. ಇ ಮತ್ತು ಈ ಇನ್ನೂ ಅಂದಾಜು ಪಟ್ಟಿ ತಯಾರಿಸಿಲ್ಲ. ಈ ಯೋಜನೆಯನ್ನು ಜಿಲ್ಲಾ ಪರಿಷತ್‌ನವರೇ ಎನ್.ಆರ್.ಇ.ಪಿ. ಯೋಜನೆಯಡಿಯಲ್ಲಿ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಯೋಜನೆಯು ಸರ್ಕಾರದ ಕಾರ್ಯಕ್ರಮದ ಅಡಿಯಲ್ಲಿ ಬರುವುದಿಲ್ಲ.

ಶ್ರೀ ಶಿವಾನಂದ.ಹೆಚ್.ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಗ್ರಾಮದಲ್ಲಿ ಸ್ಪೇಡಿಯಂನ್ನು 1986ನೇ ಇಸವಿಯಲ್ಲಿ ಎನ್‌ಆರ್‌ಇಪಿ ಅಡಿಯಲ್ಲಿ ಹಾಗೂ ಡಿಆರ್‌ಡಿಎಸ್ ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಈಗಾಗಲೇ ಅದಕ್ಕೆ ಸುಮಾರು 70 ಸಾವಿರ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಇನ್ನು ಮುಂದೆ ಈ ಸ್ಪೇಡಿಯಂ ಕೆಲಸವನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕು ? ಈ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು ? ಎಷ್ಟು ಅವಧಿಯಲ್ಲಿ ಈ ಕೆಲಸವನ್ನು ಮುಗಿಸುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಸ್.ರಮೇಶ್ :- ಮಾನ್ಯ ಅಧ್ಯಕ್ಷರೇ, ಇದನ್ನು ಸ್ಪೇಡಿಯಂ ಎಂದು ನಮ್ಮ ಇಲಾಖೆಯ ವತಿಯಿಂದ ನಾವು ಕರೆದಿಲ್ಲ. ಇದನ್ನು ಕಾಳಿಗಾಗಿ ಯೋಜನೆಯಲ್ಲಿ ಫೀಲ್ಡ್‌ನ್ನು ಡೆವಲಪ್ ಮಾಡಿದ್ದು, ಡಿಸಿ ಯವರು ಅದಕ್ಕಾಗಿ 70 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಮ್ಮ ಅಧಿಕಾರಿಗಳನ್ನು ಕರೆಸಿ ಕೇಳಿದಾಗ, ಫೀಲ್ಡ್ ಡೆವಲಪ್‌ಮೆಂಟ್‌ಗಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡಬಹುದು ಅದಕ್ಕಿಂತ ಜಾಸ್ತಿ ಕೊಡುವುದಕ್ಕೆ ಬರುವುದಿಲ್ಲ, ಡಿಸಿಯವರು ಪ್ರಾರಂಭ ಮಾಡುವಾಗಲೂ ನಮ್ಮ ಇಲಾಖೆಯ ಅನುಮತಿ ಪಡೆದುಕೊಂಡು ಪ್ರಾರಂಭ ಮಾಡಿಲ್ಲ, ನಮ್ಮ ಇಲಾಖೆಯು ಏನೂ ಕೊಟ್ಟಿಲ್ಲ ಎಂದು ಹೇಳಿದರು. ಎನೋ ಪ್ರಾರಂಭ ಮಾಡಿದ್ದಾರೆ, ಆದ್ದರಿಂದ ನಮ್ಮ ಇಲಾಖೆಯ ವತಿಯಿಂದ ಒಂದು ಲಕ್ಷ ರೂಪಾಯಿಗಳನ್ನು ಕೊಡಿಸುತ್ತೇನೆ, ಅದನ್ನು ಪೂರ್ಣ ಮಾಡುವುದಕ್ಕೆ ತಾವು ಪ್ರಯತ್ನ ಮಾಡಿ.

ಶ್ರೀ ಶಿವಾನಂದ.ಹೆಚ್.ಕೌಜಲಗಿ:- ಮಾನ್ಯ ಅಧ್ಯಕ್ಷರೆ, ಇದು ಜಿಲ್ಲಾಪರಿಷತ್ ಅಡಿಯಲ್ಲಿ ಬರುತ್ತದೆ. ನಮಗೆ ಸಂಬಂಧ ಬರುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಸರಕಾರದವರ ಹಿಡಿತ ಜಿಲ್ಲಾಪರಿಷತ್‌ನ ಮೇಲೆ ಇದೆಯೋ ಇಲ್ಲವೋ ? ಇವರ ಅಧಿಕಾರಿಗಳು ಕೂಡ ಅಲ್ಲಿ

ಇದ್ದಾರೆ, ಅವರು ಏಕೆ ಆ ಬಗ್ಗೆ ಪ್ಲಾನ್ ಎಸ್ಟಿಮೇಟ್ ಮಾಡಿ ಕಳುಹಿಸಬಾರದು ? 50ಪರ್ಸೆಂಟ್ ರಾಜ್ಯ ಸರ್ಕಾರ ಮತ್ತು 50 ಪರ್ಸೆಂಟ್ ಕೇಂದ್ರ ಸರ್ಕಾರ ಕೊಡುತ್ತಿದೆ. ಬರೀ ಪ್ಲಾನ್ ಎಸ್ಟಿಮೇಟ್ ಮಾಡಿ ಕೇಂದ್ರಸರ್ಕಾರಕ್ಕೆ ಕಳಿಸಿಕೊಟ್ಟರೆ ಆ ಕೆಲಸ ಮುಗಿಯುತ್ತದೆ. ಕೇಂದ್ರ ಸರ್ಕಾರಕ್ಕೆ ಕಳಿಸುವ ಸಲುವಾಗಿ ಅಂದಾಜುಪಟ್ಟಿ ಏಕೆ ತಾವು ಕಳಿಸಬಾರದು? ಇದರಲ್ಲಿ ಡಿಫಿಕಲ್ಟಿ ಏನಿದೆ ? ಅಲ್ಲಿ ಸ್ಟೇಡಿಯಂ ಕಟ್ಟುವ ಸಲುವಾಗಿ 4 ಎಕರೆ ಜಾಗವನ್ನು ಸಾರ್ವಜನಿಕರು ಪುಕ್ಕಟೆಯಾಗಿ ಕೊಟ್ಟಿದ್ದಾರೆ.

ಶ್ರೀ ಎಸ್.ರಮೇಶ್:- ಹಿರಿಯ ಸದಸ್ಯರಾದ ಕೌಜಲಗಿಯವರಿಗೆ ಗೊತ್ತಿದೆ, ತಾಲ್ಲೂಕುಮಟ್ಟದಲ್ಲಿ ಸ್ಟೇಡಿಯಂ ಪ್ರಾರಂಭ ಮಾಡಿದ್ದೇವೆ, ಯಾವಾಗ ಪ್ರಾರಂಭ ಮಾಡುತ್ತೇವೆ ಅಂದರೆ ಇಲಾಖೆಗೆ ಅಷ್ಟೂ ಜಮೀನು ಒಪ್ಪಿಸಬೇಕು, ಆಗ ನಾವು ಎಸ್ಟಿಮೇಟ್ ಮಾಡುತ್ತೇವೆ. ಈ ಒಂದೂ ಪ್ರೊಸೀಜರ್ ಫಾಲೋ ಮಾಡದೆ ಅವರು 70 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದಕ್ಕೇ ನಾವು ಏನು ಮಾಡಿದ್ದೇವೆ ಅಂದರೆ ಅರ್ಧಂಬರ್ಧ ಕೆಲಸ ನಿಲ್ಲಬಾರದು ಆಟ ಆಡುವ ರೀತಿಯಲ್ಲಾದರೂ ಮಾಡಬೇಕು ಎಂದು ಫೀಲ್ಡ್ ಡೆವಲಪ್‌ಮೆಂಟ್ ಫಂಡ್ ಎಂದು ಒಂದು ಲಕ್ಷ ರೂಪಾಯಿಗಳನ್ನು ನಮ್ಮ ಇಲಾಖೆವತಿಯಿಂದ ಕೊಡುವುದಕ್ಕೆ ಸಾಧ್ಯ ತಾಲ್ಲೂಕು ಮಟ್ಟದಲ್ಲಿ ಸ್ಟೇಡಿಯಂ ಮಾಡಬೇಕೆಂದರೆ ದಯವಿಟ್ಟು ನನಗೆ ಕಾಗದ ಬರೆಯಿರಿ, ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕಳಿಸಿ ಜಮೀನು ನಮ್ಮ ಇಲಾಖೆಗೆ ವರ್ಗಾಯಿಸಿ, ಅನಂತರ ನಾವು ಪರಿಶೀಲಿಸುತ್ತೇವೆ.

ಶ್ರೀ ಶಿವಾನಂದ ಹೆಚ್.ಕೌಜಲಗಿ:- ಕೇಂದ್ರ ಸರ್ಕಾರಕ್ಕೆ ಪ್ರಪೋಸಲ್ಸ್ ಕಳುಹಿಸುವುದಕ್ಕೆ ನಿಮಗೆ ಏನು ಡಿಫಿಕಲ್ಟಿ ಇದೆ ಎಂದು ನಾನು ಕೇಳುತ್ತೇನೆ. ನಮ್ಮ ಸರ್ಕಾರದ ರೊಕ್ಕ ಬೆಡ. ತಾವು ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ ಸಂತೋಷ. 4 ಲಕ್ಷ ರೂಪಾಯಿಗಳಲ್ಲಿ ಸ್ಟೇಡಿಯಂ ಅಂದರೆ 50 ಭಾಗ ಕೇಂದ್ರದವರು ಕೊಡುತ್ತಾರೆ, 50 ಪರ್ಸೆಂಟ್ ರಾಜ್ಯ ಸರ್ಕಾರ ಕೊಡುತ್ತದೆ. ಕೇಂದ್ರ ಕೊಡುವ 50 ಭಾಗದ ಸಲುವಾಗಿ ತಾವು ಬರೀ ಪ್ರಪೋಸಲ್ ಕಳುಹಿಸುವುದಕ್ಕೆ ಏನು ಡಿಫಿಕಲ್ಟಿ ಇದೆ ? ನಮ್ಮ ಎಂ.ಪಿ.ಹೇಳುತ್ತಾರೆ ನೀವು ಪ್ರಪೋಸಲ್ ಕಳಿಸಿಕೊಡಿ, ನಾವು ಮಾಡಿಸಿಕೊಡುತ್ತೇವೆ, ಪ್ರಪೋಸಲ್ ಬರದೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಪ್ರಪೋಸಲ್ ಕಳಿಸುವುದಕ್ಕೆ ನಿಮಗೆ ಏನು ತೊಂದರೆ ಇದೆ ?

ಶ್ರೀ ಎಸ್.ರಮೇಶ್:- ಶ್ರೀಮಾನ್ ಕೌಜಲಗಿಯವರು ಹೇಳಿದ್ದನ್ನು ನಾನೂ ಒಪ್ಪುತ್ತೇನೆ. ಕೇಂದ್ರದಿಂದ ನಮಗೆ 50 ಪರ್ಸೆಂಟ್ ಮ್ಯಾಚಿಂಗ್ ಗ್ರಾಂಟ್ ಬರುತ್ತದೆ. ಪಬ್ಲಿಕ್ ಕಾಂಟ್ರಿಬ್ಯೂಷನ್ ನಾವು ಎಕ್ಪೆಬೇಕಾಗುತ್ತದೆ. ಅದಕ್ಕೆ ಸಮವಾಗಿ ರಾಜ್ಯ ಸರ್ಕಾರದಿಂದಲೂ ಕೊಡಬೇಕಾಗುತ್ತದೆ. ಕೇಂದ್ರಕ್ಕೆ ಬರೆಯುವ ಪ್ರಶ್ನೆ ಯಾವಾಗ ಉದ್ಭವವಾಗುತ್ತದೆ ಎಂದರೆ, ಅವರು ನಮ್ಮ ಇಲಾಖೆಯನ್ನು ಸಂಪರ್ಕಿಸಿ ಬರೆಯಿರಿ ಎಂದು ಹೇಳಬೇಕು ತಾನೆ ? ಅವರೇ 70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಸ್ಟೇಡಿಯಂ ಮಾಡಬೇಕೆಂದು ನಮಗೂ ಆಸೆ ಇದೆ.

ಮಂಚನ ಬೆಲೆ ಅಣೆಕಟ್ಟು

(1463) ಶ್ರೀ ಅಂಜನಮೂರ್ತಿ (ನೆಲಮಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಮಂಚನಬೆಲೆ ಅಣೆಕಟ್ಟೆಗೆ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಆ ಎಷ್ಟು ಕುಟುಂಬಗಳು ಈ ಯೋಜನೆಯಿಂದ ಜಮೀನುಗಳನ್ನು ಕಳೆದುಕೊಡಿರುತ್ತಾರೆ;

ಇ ನೆಲಮಂಗಲ ಮತಕ್ಷೇತ್ರಕ್ಕೆ ಸೇರಿದ ದಾಸನಪುರ ಹೋಬಳಿ ಕಡಬಗೆರೆ ಬಳಿ ಈ ಮೇಲ್ಕಂಡ